ಟಿ.ವಿ.ಯ ಮುಂದೆ ಒಂದು ಗಂಟೆ ಮೊದಲೇ ಹೋಗಿ ಕೂತರು.

ಪ್ರೋಗ್ರಾಂ ಶುರುವಾದಂತೆ ಸಂದರ್ಶಕರು, ಮೊದಲು ಆ ಕಾರ್ಯಕ್ರಮದಲ್ಲಿ ಭಾಗವಹಿಸುವ ಮಕ್ಕಳನ್ನೆಲ್ಲಾ ಪರಿಚಯ ಮಾಡಿಕೊಟ್ಟು, ಆ ಮೇಲೆ ಒಬ್ಬೊಬ್ಬರನ್ನಾಗಿ ಪ್ರಶ್ನಿಸತೊಡಗಿದರು. ಮೊದಲು ಒಬ್ಬ ನ್ಯೂಸ್ ಪೇಪರ್ ಹಂಚುವ ಹುಡುಗ, ಆಮೇಲೆ ಹೋಟೆಲಿನಲ್ಲಿ ವೈಟರ್ ಆಗಿ ಕೆಲಸ ಮಾಡುವ ಹುಡುಗ, ಕೊನೆಗೆ ರಾಮು.

ಚನಾವಾಲಾನ ಮಗನ ಗಂಜಿ ಮುರಿಯದ ದೊಗಳೆ ಚಡ್ಡಿ– ಶರಟು ಧರಿಸಿ, ಸಂಕೋಚದಿಂದ ಮುದುರಿ ಕುಳಿತಿದ್ದ ರಾಮೂನ ಪ್ರಶ್ನೆ ಮಾಡ ತೊಡಗಿದರು. ಆತ, ಮೊದಲು ಸ್ವಲ್ಪ ಅನುಮಾನದಿಂದ, ಆಮೇಲೆ ಧೈರ್ಯವಾಗಿ, ತೊಡರದೆ ಉತ್ತರ ಕೊಡತೊಡಗಿದ.

'ಹೌದು– ನನಗೆ ತಂದೆ ತಾಯಿ ಇಬ್ಬರೂ ಇಲ್ಲ. ಹಾಂ, ಕಾಕಿ ಜೊತೆ ಇದ್ದೇನೆ. ಕಾಕಿ ಏನಾಗಬೇಕೋ ಗೊತ್ತಿಲ್ಲ... ಏನು? ಓದಬೇಕಂತ ಆಸೇನಾ? ಇದೆ. ಆದರೆ ಸ್ಕೂಲಿಗೆ ಹೋಗಲು ವೇಳೆ ಇಲ್ಲ. ಮರಾಠಿ ಅಕ್ಷರಗಳು ಬರುತ್ತೆ. ಆಂ, ಶೂ ಪಾಲಿಶ್ ವೃತ್ತಿಯೆಂದರೆ ಇಷ್ಟವೇ... ಏಕೆ ಎಂದರೆ ಮೊದಲಿಂದ ಅಭ್ಯಾಸವಾಗಿಬಿಟ್ಟಿದೆ. ಈ ಕೆಲಸ ಬಿಟ್ಟರೆ ಬೇರೆ ಏನು ಮಾಡ್ತೀನೋ ಗೊತ್ತಿಲ್ಲ. ಸಿನಿಮಾ ಅಂದ್ರೆ... ಹಾಂ, ತುಂಬಾ ಇಷ್ಟ. ಆದ್ರೆ ಹೆಚ್ಚು ನೋಡೋಕೆ ಆಗೋಲ್ಲ. ಊಹೂಂ ಕ್ರಿಕೆಟ್, ಫುಟ್‌ಬಾಲ್ ಯಾವ ಆಟಾನೂ ಆಡೋಕೆ ಬರೋಲ್ಲ. ಎಂದೂ ಆಡಿಲ್ಲ... ನಾನು ಸಂಪಾದಿಸಿದ್ದೆಲ್ಲಾ ಏನು ಮಾಡ್ತೀ ಅಂದ್ರೆ– ಕಾಕೀಗೆ ಕೊಟ್ಟುಬಿಡ್ತೀನಿ.'

ಪ್ರಶ್ನೆಗಳ ಮಾಲೆ ಹರಿದಂತೆ ಉತ್ತರ ಕೊಡುತ್ತಾ ನಡೆದಿದ್ದ ರಾಮು. ಕೊನೆಗೆ ಸಂದರ್ಶಕರು ಹೇಳಿದರು.

'ಈಗ ಸಮಯ ಆಗ್ತಾ ಬಂದಿದೆ. ಕಾರ್ಯಕ್ರಮ ಮುಗಿಯೋಕೆ ಮುಂಚೆ, ನಿಂಗೆ ಇನ್ನೆರಡು ಮುಖ್ಯವಾದ ಪ್ರಶ್ನೆಗಳನ್ನು ಕೇಳಿಬಿಡ್ತೀನಿ. ಸರಿಯಾ? ನಿಂಗೆ 1979 ಅಂತರರಾಷ್ಟ್ರೀಯ ಮಕ್ಕಳ ವರ್ಷ ಅಂತ ಗೊತ್ತಾ?'

ರಾಮು ಹೇಳಿದ 'ಇಲ್ಲ. ಗೊತ್ತಿಲ್ಲ.'

'ಅಂದ್ರೆ ನೀನು ಈ ವಿಷಯ ಕೇಳೇ ಇಲ್ವಾ?' 'ಇಲ್ಲ.'

'ಕೊನೇ ಪ್ರಶ್ನೆ. ನೀನು ದೊಡ್ಡೋನಾದ ಮೇಲೆ ಏನಾಗಬೇಕೂಂತ ಆಸೆ?'

ಏಕೋ, ರಾಮು ಒಂದೆರಡು ಕ್ಷಣ ಅನುಮಾನಿಸಿದ.

'ನೋಡು, ಕೆಲವರಿಗೆ ಡಾಕ್ಟರ್, ಕೆಲವರಿಗೆ ಎಂಜಿನಿಯರ್, ಕೆಲವರಿಗೆ ಫಿಲ್ಮ್‌ಸ್ಟಾರ್ ಏನಾದರೂ ಆಗಬೇಕೂಂತ ಎಲ್ಲಾ ಮಕ್ಕಳಿಗೂ ಆಸೆ ಇದ್ದೇ ಇರುತ್ತೆ. ನಿಂಗೆ ಏನು ಮಾಡಬೇಕೂಂತ ಆಸೆ?'

ರಾಮು ಯೋಜನೆ ಮಾಡಿದ– ತಾನು ದೊಡ್ಡೋನಾದ ಮೇಲೆ ಏನಾಗಬಹುದು? ಅವನ ಮನಸ್ಸಿನ ತುಂಬಾ ಪುಟ್ಟ, ದೊಡ್ಡ ಬಣ್ಣ ಬಣ್ಣದ ಮಿರುಗುವ ಶೂಗಳು ಮೂಡಿ, ಬೃಹದಾಕಾರ ತಾಳಿ, ಅವನನ್ನು ಮುತ್ತಿಗೆ ಹಾಕಿದವು.

ರಾಮು ತಕ್ಷಣ ಹೇಳಿದ. 'ಹಾಂ, ನಾನು ದೊಡ್ಡೋನಾದ ಮೇಲೆ ಶೂ ಅಂಗಡಿ, ಕೊಲಾಬಾದಲ್ಲಿ ದೊಡ್ಡ ಶೂ ಅಂಗಡಿ ಇಡಬೇಕೂಂತ ಆಸೆ. ದೊಡ್ಡ ಕೆಂಪು ಬಣ್ಣದ ಕಾರು ತಗೊಬೇಕೂಂತ ಆಸೆ.'

ಅಷ್ಟು ಹೊತ್ತಿಗೆ ವೇಳೆ ಮುಗಿದಿದ್ದರಿಂದ ಕಾರ್ಯಕ್ರಮ ನಿಧಾನವಾಗಿ 'ಫೇಡ್–ಔಟ್' ಆಗತೊಡಗಿತು. ಹಾಗೆಯೇ ನೋಡುತ್ತಿದ್ದವರ ಮನಃಪಟಲದಿಂದ ಮಂಜಿನಂತೆ ಕರಗಿಹೋಗಿದ್ದ ರಾಮು.